# JP-2-07

**PAPER II / प्रश्न-पत्र II**
**Kannada Language Supplement**
**कन्नड भाषा परिशिष्ट**
**PART IV & V / भाग IV & V**

This booklet contains 20 pages.
इस पुस्तिका में 20 पृष्ठ हैं ।

**Test Booklet Code**
**परीक्षा पुस्तिका संकेत**

**P**

**Test Booklet No.**
**परीक्षा पुस्तिका संख्या**

**525981**

**Do not open this Test Booklet until you are asked to do so.**
**इस परीक्षा पुस्तिका को तब तक न खोलें जब तक कहा न जाए ।**
**Read carefully the Instructions on the Back Cover (Page 19 & 20) of this Test Booklet.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**

**For instructions in Kannada see Page 2 of this Booklet. / कन्नड में निर्देशों के लिए इस पुस्तिका का पृष्ठ 2 देखें ।**

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I, and Part II OR III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Blue / Black Ball Point Pen only** for writing particulars on this page / marking responses in the Answer Sheet.
5. The CODE for this Language Booklet is **P**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

## *परीक्षार्थियों के लिए निर्देश*

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग **IV** (भाषा I) **या** भाग **V** (भाषा II) **कन्नड** भाषा में देना चाहते हैं, लेकिन **दोनों नहीं** ।
2. परीक्षार्थी भाग I एवं भाग II या III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल नीले/काले बॉल पॉइंट पेन** का प्रयोग करें ।
5. इस भाषा पुस्तिका का **संकेत** है **P** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ**-2 एवं मुख्य परीक्षा पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा I - (कन्नड़) (प्र. 91 से प्र. 120)
   भाग-V : भाषा II - (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

Name of the Candidate (in Capitals) : ____________________
परीक्षार्थी का नाम (बड़े अक्षरों में) :
Roll Number : in figures ____________________
अनुक्रमांक : (अंकों में)
: in words ____________________
: (शब्दों में)
Centre of Examination (in Capitals) : ____________________
परीक्षा केन्द्र (बड़े अक्षरों में) :
Candidate's Signature : ____________________ Invigilator's Signature : ____________________
परीक्षार्थी के हस्ताक्षर : निरीक्षक के हस्ताक्षर :
Facsimile signature stamp of
Centre Superintendent ____________________

P P

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# JP-2-07

## ಪ್ರಶ್ನೆ ಪತ್ರಿಕೆ II
## ಕನ್ನಡ ಭಾಷಾ ಪೂರಕ
## ಭಾಗ IV & V

ಪ್ರಶ್ನೆ ಪುಸ್ತಿಕೆ ಸಂಕೇತ

**P**

ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.

ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.

**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆ ಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **P** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆ ಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ 60 ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :

   ಭಾಗ IV : ಭಾಷಾ I — (ಕನ್ನಡ) (ಪ್ರಶ್ನೆ 91 ರಿಂದ 120)

   ಭಾಗ V : ಭಾಷಾ II — (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ, (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of

Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ**-I ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

# ಭಾಗ IV
## ಭಾಷೆ I
## ಕನ್ನಡ

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 91 ರಿಂದ 99) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

......ಗೌರಿ ಭೂಮಿಗೆ ಇಳಿದೇ ಇಳಿದಳು. ನಮ್ಮ ಮನೆಯಲ್ಲಿ ಬೆಳಕು ಮೂಡಿತು. ಸಂತೋಷ ಚಿಮ್ಮಿತು. ಅದೃಷ್ಟ ಖುಲಾಯಿಸಿತು. ಹಾಲು, ಮೊಸರು, ಬೆಣ್ಣೆ ತಿಂದು ಕೆಂಪ ದುಂಡು ದುಂಡಾಗಿ ಬೆಳೆದ. ಅದರ ದುಡ್ಡಿನಲ್ಲೇ ಈ ಮನೆ ಕಟ್ಟಿದ ಜಾಗ ಕೊಂಡುಕೊಂಡೆ. ಗೌರಿ ಪುಣ್ಯವಂತೆ. ತಾನು ಹುಟ್ಟಿದ ಒಂದೂವರೆ ವರ್ಷಕ್ಕೆ ಒಬ್ಬ ತಮ್ಮನನ್ನು ಕರೆದುಕೊಂಡಳು. ಅವನನ್ನು ಮಾರಿ ಒಂದು ಜೊತೆ ಗಿಡ್ಡಗಳನ್ನು ಕೊಂಡು ಅವರಿವರ ಹೊಲ ವಾರಕ್ಕೆ ಸಾಗು ಮಾಡಿದೆ. ಗೌರಿಯ ಗೊಬ್ಬರ ಹಾಕಿದ ಯಾವ ನೆಲವೂ ಹುಸಿಯುತ್ತಿರಲಿಲ್ಲ. ಅವಳ ಕೃಪೆಯಿಂದ ಹೊಟ್ಟೆ ಬಟ್ಟೆಗೆ ಸಾಕಾಗುವಷ್ಟು ನೆಮ್ಮದಿಯ ಕುಳವಾದೆ. ಗೌರಿಯ ತಾಯಿ ಮತ್ತೊಮ್ಮೆ ಮಗನನ್ನು ಹೆತ್ತು ಮೇಯಲು ಹೋಗಿದ್ದವಳು ಗರೇಗುಡ್ಡದಲ್ಲಿ ಕಿರುಬನ ಬಾಯಿಗೆ ತುತ್ತಾದಳು..... ಸಿದ್ದಪ್ಪನ ಕಣ್ಣಿನಿಂದ ನೀರು ಜಾರಿ ಎಸರಿನೊಳಕ್ಕೆ ಬಿತ್ತು.

"ಅದ್ಯಾಕಜ್ಜಾ ಅಳ್ತಿ.... ಉಣ್ಣಾಕಿಲ್ವ....ಹಿಟ್ಟಾರಿ ಹೋಯ್ತಾದೆ..... ಉಣ್ಣು" ..... ಪಕ್ಕದಲ್ಲಿದ್ದ ಮೂರು ವರ್ಷದ ಮೊಮ್ಮಗ ಹೇಳಿದ. "ನಾನುಣ್ತಿನಿ ನೀನುಣ್ಣು ಮೊಗ..... ಕಣ್ಣಲ್ಲಿ ಏನೋ ಕಸ ಬಿಳ್ತು ಕಂತೆ".-ಎಡಗೈಯಿಂದ ಕಣ್ಣುಜ್ಜುತ್ತಾ ಹೇಳಿದ ಸಿದ್ದಪ್ಪ

"ನಾನೂ ಅಷ್ಟೋತ್ನಿಂದ ನೋಡ್ತಾ ಇವ್ನಿ..... ಒಂದ್ ತುತ್ತೂ ಉಣ್ದೆ ಗುಕ್ ಕೈಲಿ ಹಿಡ್ಕೊಂಡು ಹಂಗೆ ಏನೋ ಯೋಚ್ನೆ ಮಾಡ್ತಾ ಕೂತಿದ್ದೀರಿ".....
-ಸೊಸೆ ಒಳಗಿನಿಂದ ಹೇಳಿದಳು.

ನಾಯಿ 'ಅಗಲ' ಕಡೆಗೇ ನೋಡುತ್ತಿತ್ತು. ಕೈಲಿದ್ದ ತುತ್ತನ್ನು ನಾಯಿಗೆ ಎಸೆದ. ಈ ಪ್ರಾಣಿಗಳಿಗೆ ದೇವರು ಅದೆಂಥ ಮನಸ್ಸು ಕೊಟ್ಟವನೆ. ಹೊಟ್ಟೆಗೆ ಹಾಕಲಿ. ಹಾಕದೆ ಇರಲಿ, ಹೊಡೀಲಿ, ಬಡೀಲಿ, ತಮ್ಮನ್ನು ನಂಬಿದವರನ್ನು ಎಂಥಾ ಕಾಲದಲ್ಲೂ ಕೈಬಿಟ್ಟು ದೂರ ಹೋಗೋದಿಲ್ಲ. ಆದರೆ ಮನುಷ್ಯ ? ಸ್ವಲ್ಪವೂ ಕರುಣೆಯಿಲ್ಲದೆ ತನಗೆ ಆದೋರು, ಹೋದೋರು ಎಲ್ಲರನ್ನು ಮರೆತು ತನ್ನ ಜೀವ ಉಳಿಸಿಕೊಳ್ಳೋದೇ ಎಲ್ಲದಕ್ಕಿಂತ ದೊಡ್ಡದು ಅಂತಾನೆ. ಹಂಗಾದರೆ ಈ ಮೂಕ ಪ್ರಾಣಿಗಳಿಗಿಂತ ಮನುಷ್ಯ ಯಾವ ಲೆಕ್ಕದಲ್ಲಿ ದೊಡ್ಡೋನು ? ಗೌರಿ..........

ಗೌರಿ..........

ನನಗೆ ತಾಯಿ ತಂದೆ ದೇವರು ಎಲ್ಲಾ ಆಗಿದ್ದಳು. ಅವಳು ಜೊತೇಲಿದ್ದರೆ ನಾಕಾಳಿನ ಬಲ.

ಒಂದು ಸಲ, ಹೊತ್ತಾರೆ ಹೊತ್ತು. ಗೌರಿಯನ್ನು ಕರೆದುಕೊಂಡು ಹೊಲದ ಹತ್ತಿರ ಹೋದೆ. ಕಬ್ಬಿನಂತೆ ಬೆಳೆದು ನಿಂತ ಎಳೆ ಮೊಗರು ಹುಲ್ಲಿನ ಬದುವಿನಲ್ಲಿ ಅವಳನ್ನು ಕಟ್ಟಿ ಹಾಕಿ ಕೆರೆ ಕಡೆ ಹೋಗಿ ಬರುತ್ತಾ ಇದ್ದೆ. ಎದುರಿಗೆ ರಾಚಪ್ಪ ಕೊಡಲಿ ಹೆಗಲ ಮೇಲಿಟ್ಟು-ಕೊಂಡು ಬರುತ್ತಾ ಇದ್ದ. ಹಿಂದಿನ ದಿನ ನಾನು ಗುತ್ತಿಗೆಗೆ ಮಾಡಿದ್ದ ತೋಟದಲ್ಲಿ ಎಳನೀರು ಕೀಳ್ತಾ ಇದ್ದನಂತೆ. ಅದನ್ನು ಕಂಡು ಸಾಕಿ ಬೈದರೆ ಅವಳನ್ನೇ ಹೀನಾಮಾನವಾಗಿ ಬೈದು ಹೊಡೆಯೋಕೂ ಬಂದಿದ್ನಂತೆ. ಇವನ ಸೊಕ್ಕು ಎಷ್ಟಾಯಿತು ? ಅದನ್ನೇ ಈಗ ಕೇಳಿದೆ-

"ಏನೋ ರಾಚಪ್ಪ, ನಮ್ಮ ಮರದಲ್ಲೇ ಎಳನೀರು ಕಿತ್ತು ನನ್ ಹೆಂಡ್ತಿನೇ ಹೊಡೆಯೋಕೆ ಬಂದಿದ್ದೆಯಂತೆ. ಏನು ಹೇಳೋರ್ ಕೇಳೋರ್ ಯಾರೂ ಇಲ್ವೋ ?" ಎದೆಗೆ ಒದ್ದಂತೆ ಅವನು ಉತ್ತರ ಕೊಟ್ಟ-

"ಏನ್ಲಾ ಸಿದ್ದ, ತಲೇಗಿಲೇ ತಿರಗ್ತಾ ಅದ್ಲ ? ತಿರುಕನಿಗೆ ಐಸಿರಿ ಬಂದ್ರೆ ಅರ್ಧರಾತ್ರೀಲಿ ಕೊಡೆ ಹಿಡಿಸ್ಕೊಂಡ್ನಂತೆ. ಎಂಜಲ ಹಿಟ್ಟು ಎತ್ಕೊಂಡು ಬಿದ್ದಿದ್ದೋನ್ಗೆ ಏಟ್ಲಾ ದವಲತ್ತು ?"

ಯಾವ ಮಾತಿಗೆ ಯಾವ ಮಾತು ? ನನಗೆ ಭಯಂಕರ ಸಿಟ್ಟು ಬಂದಿತ್ತು. ಹಿಂದೆ ಮುಂದೆ ನೋಡದೆ ಕೂಡಲೇ ಮುಂದೆ ನುಗ್ಗಿ ಅವನ ಜುಟ್ಟು ಹಿಡಿದು ಬಗ್ಗಿಸಿ ಕುತ್ತಿಗೆ ಮೇಲೆ ದಬದಬನೆ ನಾಲ್ಕು ಗುದ್ದು ಇಡಿದು, ಹಿಂದಕ್ಕೆ ನೂಕಿದೆ. ಅಷ್ಟು ದೂರ ಹೋಗಿ ಬಿದ್ದವನು ಕೊಸರಿಕೊಂಡು ಎದ್ದು ಕೊಡಲಿ ಎತ್ತಿಕೊಂಡು ಹಲ್ಲು ಕಡೀತಾ ನುಗ್ಗಿ ಬಂದ. ಕೊಡಲಿ ಕಂಡು ನನಗೆ ಗಾಬರಿಯಾಯಿತು. ಹಿಂದೆ ಹಿಂದೆ ಸರಿದೆ. ಅವನು ಮುಂದೆ ಮುಂದೆ ಬಂದ. ಹಿಂದುಗಡೆ ಇದ್ದ ಹುತ್ತ ಎಡವಿ ಕೆಳಕ್ಕೆ ಬಿದ್ದು, 'ಅಯ್ಯೋ' ಎಂದು ಚೀರಿದೆ, ಕಣ್ಣಿಗೆ ಕತ್ತಲುಗಟ್ಟಿತು. ಮರುಚಣದಲ್ಲೇ ಅವನೂ 'ಅಯ್ಯೋ' ಎಂದು ಚೀರಿದ. ನಾನು ಹೊರಳಿ ಎದ್ದು ನೋಡುವಷ್ಟರಲ್ಲಿ ಅವನು ಕೆಳಗೆ ಬಿದ್ದಿದ್ದ. ಗೌರಿ ಬುಸುಗುಟ್ಟುತ್ತಾ ತನ್ನ ಚೂಪಾದ ಕೊಂಬುಗಳನ್ನು ಅವನ ಹೊಟ್ಟೆಗೆ ಗುರಿಯಿಟ್ಟು ನಿಂತಿದ್ದಳು. ಆ ವೇಳೆಗೆ ಸುತ್ತಮುತ್ತಲಿದ್ದವರು ಓಡಿ ಬಂದು ಬಿಡಿಸಿದರು. ಆ ದಿನ ಗೌರಿ ಇಲ್ಲದಿದ್ದರೆ ನಾನು ಏನಾಗುತ್ತಿದ್ದೆನೋ.....

91. ಗೌರಿಯ ತಾಯಿ ತುತ್ತಾದದ್ದು
(1) ತೋಳನ ಬಾಯಿಗೆ
(2) ಹುಲಿಯ ಬಾಯಿಗೆ
(3) ಕಿರುಬನ ಬಾಯಿಗೆ
(4) ಸಿಂಹದ ಬಾಯಿಗೆ

92. ಸಿದ್ದಪ್ಪನ ಕಣ್ಣಿನಿಂದ ನೀರು ಬರಲು ಕಾರಣ
(1) ಗೌರಿಯ ನೆನಪಿನಿಂದ
(2) ಕಣ್ಣಲ್ಲಿ ಕಸ ಬಿದ್ದುದರಿಂದ
(3) ಹೊಗೆಯಿಂದ
(4) ಗೌರಿಯು ತಿವಿದಿದ್ದರಿಂದ

93. ಗೌರಿಯ ತಮ್ಮನನ್ನು ಮಾರಿ ಕೊಂಡು-ಕೊಂಡದ್ದು ಏನನ್ನು ?
(1) ಒಂದು ಜೊತೆ ಗಿಡ್ಡಗಳನ್ನು
(2) ಒಂದು ಜೊತೆ ಓಲೆಗಳನ್ನು
(3) ಒಂದು ಜೊತೆ ಕುರಿಗಳನ್ನು
(4) ಯಾವುದೂ ಅಲ್ಲ

94. ಗೌರಿಯನ್ನು ಸಾಕಿದವರು
(1) ರಾಚಪ್ಪ
(2) ಬೈರಪ್ಪ
(3) ಮರಿಯಪ್ಪ
(4) ಸಿದ್ದಪ್ಪ

95. ಮರುಚಣ ಪದದ ಅರ್ಥ ಕೊಡುವ ಇನ್ನೊಂದು ಪದ
(1) ಮರುಕಣ
(2) ಮರುಕ್ಷಣ
(3) ಮರುಗಣ
(4) ಮರುದಿನ

96. ಉತ್ತು ಪದದ ಮೂಲ ಕ್ರಿಯಾಪದ

(1) ಬೀಳು

(2) ಹೂಳು

(3) ಉರುಳು

(4) ಉಳು

97. ಹೊಟ್ಟೆ ಬಟ್ಟೆ ಪದಕ್ಕೆ ಸಮಾನಾರ್ಥಕ ಪದ

(1) ಕುಶಲೋಪಾಯ

(2) ಜೀವನೋಪಾಯ

(3) ಎರಡೂ ಹೌದು

(4) ಎರಡೂ ಅಲ್ಲ

98. ಲೇಖಕ 'ಗೌರಿ' ಎಂದು ಕರೆದಿರುವುದು

(1) ಎಮ್ಮೆಯನ್ನು

(2) ಹಸುವನ್ನು

(3) ಎತ್ತನ್ನು

(4) ಕುರಿಯನ್ನು

99. ಗೌರಿಯನ್ನು ಸಾಕಿ ಲೇಖಕರು ಖರೀದಿಸಿದ್ದು

(1) ವಸ್ತ್ರ

(2) ಒಡವೆ

(3) ಭೂಮಿ

(4) ಮನೆ ಕಟ್ಟಿದ ಜಾಗ

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 100 ರಿಂದ 105) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

ಅರಳಿ ಮಲ್ಲಿಗೆ ಮೊಗ್ಗು ಸುತ್ತ ಗಂಧವ ಚೆಲ್ಲಿ
ವಸಂತನಾಗಮನ ಸಾರಿದಾಗ
ಮಾಮರದ ರೆಂಬೆಯಲಿ ಕುಳಿತಿದ್ದ ಕೋಗಿಲೆಯು
ಬೆರೆಸಿತದರೊಳಗೊಂದು ಕುಕಿಲರಾಗ
ಬಳುಕಾಡಿ ಮಲ್ಲಿಗೆಯು ಕೋಗಿಲೆಯ ಕರೆದಿತ್ತು;
"ಪ್ರಿಯ ಗೆಳತಿ ಹಾಡೊಂದ ಹಾಡೇ
ಬಾನಸಂಚಾರಿಣಿಯೆ ಅನುಭವದ ಹೊನ್ನಣಿಯೆ
ಲೋಕವಾರ್ತೆಯದೇನು ಅರುಹೆ"
"ಏನೆಂದು ಹಾಡಲಿ ನಾನು ಏನ ಅರುಹಲಿ ಚೆಲುವೆ
ಬಣ್ಣ ಬೆಡಗಿನ ಮಾತನರಿಯೆ
ಕೃತಕತೆಯ ಜಾಲದಲಿ ಸಿಲುಕಿಕೊಂಡಿದೆ ಜಗವು
ನೈಜತೆಗೆ ಇಲ್ಲ ಬೆಲೆಯು
ಪ್ರಕೃತಿಯ ಸಿರಿಮುಡಿಗೆ ಕೊಡಲಿ ಹಾಕಿದ ಮನುಜ
ಸ್ವಾರ್ಥದಲಿ ಮುಳುಗಿಹನು ಪೂರ
ಭಿತ್ತಿಯಲಿ ಬಿಡಿಸುವನು ಗಿಡಬಳ್ಳಿ ಚಿತ್ತಾರ
ಮರೆತೇಬಿಟ್ಟಿಹನು ಮಣ್ಣ ಸೊಗಡ
ಮಾವು ಮಲ್ಲಿಗೆ ಭ್ರಮರ ಮತ್ತದರ ಝೇಂಕಾರ ಕವಿ ಕಲ್ಪನೆಯ ಗಾನಲಹರಿ
ನಲುಗದಿರು ಇದ ಕೇಳಿ ಬರಡಲ್ಲ ಈ ಬುವಿಯು
ಅಮರ ಪ್ರೇಮದ ಒರತೆ ಹರಿಯುವುದು ಉಂಟು ಅಲ್ಲಲ್ಲಿ"

100. ಈ ಕವಿತೆಯಲ್ಲಿ ಬರುವ "ಕುಕಿಲರಾಗ" ಪದದ ಅರ್ಥ

(1) ಕುಖ್ಯಾತ ರಾಗ

(2) ತಿಳಿಯದ ರಾಗ

(3) ಕೋಕಿಲ ರಾಗ

(4) ಯಾವುದೂ ಅಲ್ಲ

101. ಮಲ್ಲಿಗೆ ಹೂ ಕೋಗಿಲೆಯನ್ನು ಕರೆದ ಉದ್ದೇಶ
(1) ಲೋಕದ ವಾರ್ತೆಯನ್ನು ತಿಳಿಯಲು
(2) ಸುಂದರವಾಗಿ ಹಾಡಲು
(3) ವಸಂತನ ಆಗಮನವನ್ನು ಅರಿಯಲು
(4) ಯಾವುದೂ ಅಲ್ಲ

102. ಮಲ್ಲಿಗೆ ಹೂ ಕೋಗಿಲೆಯನ್ನು ಏನೆಂದು ವರ್ಣಿಸಿತು ?
(1) ಬಾನ ಸಂಚಾರಿಣಿ
(2) ಹೊನ್ನಗಣಿ
(3) ಎರಡೂ ಹೌದು
(4) ಯಾವುದೂ ಅಲ್ಲ

103. ಅರುಹು ಪದದ ಅರ್ಥ
(1) ಹೇಳು
(2) ಕೇಳು
(3) ಬೀಳು
(4) ಹಾಡು

104. ಮುಳುಗಿಹನು ಎಂಬುದರ ಅರ್ಥ
(1) ಮುಳುಗಿದನು
(2) ಮುಳುಗಿದ್ದಾನೆ
(3) ಮುಳುಗುತ್ತಾನೆ
(4) ಮುಳುಗುತ್ತಿದ್ದಾನೆ

105. ಈ ಕವಿತೆಯಲ್ಲಿ ಅರಳಿದ ಮೊಗ್ಗು ಯಾರ ಆಗಮನವನ್ನು ಹೇಳುತ್ತದೆ ?
(1) ಶಶಿಧರನ ಆಗಮನ
(2) ಹೇಮಂತನ ಆಗಮನ
(3) ಶರತ್ ನ ಆಗಮನ
(4) ವಸಂತನ ಆಗಮನ

ನಿರ್ದೇಶನಗಳು : ಮುಂದಿನ ಪ್ರಶ್ನೆಗಳಿಗೆ ಅವುಗಳ ಕೆಳಗೆ ಕೊಟ್ಟಿರುವ ಆಯ್ಕೆಗಳಲ್ಲಿ ಸರಿಯಾದುದನ್ನು ಆಯ್ದು ಉತ್ತರಿಸಿ :

106. ಓದುವಿಕೆಯಲ್ಲಿ ಸಂಗ್ರಹ ಕಲೆಯೆಂದರೆ
(1) ಟಿಪ್ಪಣಿ ನೀಡುವುದು
(2) ವಿಶ್ಲೇಷಣೆ
(3) ಒಗಟು ಬಿಡಿಸುವುದು
(4) ಟಿಪ್ಪಣಿ ಮಾಡುವುದು

107. ಈ ಕೆಳಗಿನ ಸಂಭಾಷಣೆಗೆ ಮೌಲ್ಯಮಾಪನ ಮಾಡಿ :
ಶಿಕ್ಷಕರು : ನಿನ್ನ ಸ್ನೇಹಿತನ ಜೊತೆಗೆ ಕ್ರೀಡೆಗಳ ಬಗ್ಗೆ ಮಾತಾಡಿ
ವಿದ್ಯಾರ್ಥಿ 1 : ಯಾಕೆ ? ಚರ್ಚಿಸಬಾರದೆ ?
ವಿದ್ಯಾರ್ಥಿ 2 : ಸರಿ ಕಬಡ್ಡಿ ಬಗ್ಗೆ ಮಾತಾಡಬಹುದಾ ?
(1) ವಿದ್ಯಾರ್ಥಿ 2 ಸರಿ, ವಿದ್ಯಾರ್ಥಿ 1 ತಪ್ಪು ಪ್ರತಿಕ್ರಿಯೆ.
(2) ವಿದ್ಯಾರ್ಥಿ 1 ಸರಿ, ವಿದ್ಯಾರ್ಥಿ 2 ತಪ್ಪು ಪ್ರತಿಕ್ರಿಯೆ.
(3) ವಿದ್ಯಾರ್ಥಿ 1 ಮತ್ತು 2 ಇಬ್ಬರೂ ಸರಿ.
(4) ವಿದ್ಯಾರ್ಥಿ 1 ಮತ್ತು 2 ಇಬ್ಬರೂ ತಪ್ಪು

108. ಈ ಕೆಳಗಿನವುಗಳಲ್ಲಿ ಯಾವ ಅಂಶವು ಶೈಕ್ಷಣಿಕ ಪೂರ್ವ ಅವಧಿಯಲ್ಲಿ ಮಕ್ಕಳಿಗೆ ತಿಳುವಳಿಕೆಯ ಅಭಿವೃದ್ಧಿಗೆ ಹೆಚ್ಚು ಪರಿಣಾಮಕಾರಿಯೆಂದು ಸಂಶೋಧನೆಯಿಂದ ಸಾಬೀತಾಗಿದೆ ?
(1) ಮಕ್ಕಳು ಲಯಬದ್ಧ ಪದ್ಯಗಳನ್ನು ಕಲಿಯುವುದು
(2) ಕುಟುಂಬದವರು ಶಾಲೆಯ ಬಗ್ಗೆ ಮಾತನಾಡುವುದು
(3) ಪೋಷಕರಿಗೆ ಮಕ್ಕಳಿಗೆ ಗಟ್ಟಿಯಾಗಿ ಓದಿ ಹೇಳುವುದು
(4) ಪೋಷಕರು ಮಕ್ಕಳಿಗೆ ಅ ಆ ಇ ಈ ಕಲಿಸುವುದು

109. ವಿದ್ಯಾರ್ಥಿಯೋರ್ವ ಓದುವಾಗ ಪಠ್ಯ-ದಲ್ಲಿರುವ ಪದವೊಂದಕ್ಕೆ ಬದಲಾಗಿ ಅದೇ ಅರ್ಥದ ಇನ್ನೊಂದು ಪದವನ್ನು ಬಳಸಿ ಓದಿದಾಗ ಶಿಕ್ಷಕರ ಪ್ರತಿಕ್ರಿಯೆ ಹೇಗಿರಬೇಕು ?

(1) ವಿದ್ಯಾರ್ಥಿಯನ್ನು ಸರಿಯಾಗಿ ಓದಲು ಹೇಳಬೇಕು

(2) ವಿದ್ಯಾರ್ಥಿಯನ್ನು ಮುಂದೆ ಓದಲು ಬಿಡಬೇಕು

(3) ವಿದ್ಯಾರ್ಥಿಯ ತಪ್ಪನ್ನು ತಾನು ಗಟ್ಟಿಯಾಗಿ ಓದುವುದರ ಮೂಲಕ ತಿದ್ದಬೇಕು

(4) ಯಾವುದೂ ಅಲ್ಲ

110. ಮಂಚಿನ ಬರಹದ ಶೈಲಿಗೆ ಬದಲಾಗಿ ಸ್ವಂತ ಶೈಲಿಯಲ್ಲಿ ಬರೆಯುವುದನ್ನು

(1) ಕಾಲ್ಪನಿಕ ಶೈಲಿ

(2) ಸಂವಾದನಾತ್ಮಕ ಶೈಲಿ

(3) ಸೃಜನಶೀಲ ಶೈಲಿ

(4) ಪತ್ರಬರಹದ ಶೈಲಿ

111. ಕಲಿಕೆಯ ಯಾವ ಕ್ಷೇತ್ರ ಉನ್ನತ ಸ್ಥಾಯಿಯ ಚಿಂತನ ಶೀಲತೆಯನ್ನು ಒಳಗೊಳ್ಳುತ್ತದೆ ?

(1) ಜ್ಞಾಪಕ

(2) ಅರ್ಥಗ್ರಹಣೆ

(3) ಮೌಲ್ಯಮಾಪನ

(4) ಅನ್ವಯ

112. ಒಂದು ಪ್ರದೇಶದ ಜನಸಮೂಹಕ್ಕೆ ಮಾತ್ರ ಸೀಮಿತವಾದ ಒಂದು ಭಾಷೆಯ ಒಂದು ಬಗೆಯನ್ನು ಏನೆಂದು ಕರೆಯುತ್ತಾರೆ ?

(1) ಒಗಟು

(2) ಉಪಭಾಷೆ

(3) ಗುಚ್ಛ

(4) ಟೋನ್

113. ಯಾವ ಮಾಧ್ಯಮ ಕಲಿಕೆಗೆ ಹೆಚ್ಚಿನ ಆಯ್ಕೆಗಳನ್ನು ಒದಗಿಸುತ್ತದೆ ?

(1) ದೂರದರ್ಶನ ಮತ್ತು ಆಕಾಶವಾಣಿ

(2) ಸಮೂಹ ಮಾಧ್ಯಮ

(3) ದೃಶ್ಯ ಪಟಗಳು

(4) ಕ್ಷೇತ್ರ ಭೇಟಿ

114. ನೀವು ಸಿನಿಮಾವೊಂದರಲ್ಲಿ ಕುಳಿತಿರುವಾಗ ನಿಮ್ಮ ಹಿಂದೆ ಕುಳಿತಿರುವ ವ್ಯಕ್ತಿ ಮೊಬೈಲ್ ಫೋನಿನಲ್ಲಿ ಗಟ್ಟಿಯಾಗಿ ಮಾತಾಡ-ಲಾರಂಭಿಸುತ್ತಾನೆ. ಆಗ ನೀವು ಆ ವ್ಯಕ್ತಿಗೆ ಹಾಗೆ ಮಾಡಬೇಡವೆಂದು ಹೇಳಬೇಕಾಗುತ್ತದೆ. ಆ ವ್ಯಕ್ತಿಯನ್ನು ಕೋರಿಕೊಳ್ಳಲು ಕೆಳಗಿನ ವಾಕ್ಯಗಳಲ್ಲಿ ಒಂದು ಸೌಮ್ಯ ರೂಪವನ್ನು ಆರಿಸಿ.

(1) ಗಟ್ಟಿಯಾಗಿ ಮಾತನಾಡಬೇಡಿ

(2) ದಯವಿಟ್ಟು ಥಿಯೇಟರ್ ಒಳಗಡೆ ಮೊಬೈಲ್‌ಫೋನ್ ಉಪಯೋಗಿಸಬೇಡಿ

(3) ಮೊಬೈಲ್ ಫೋನ್ ಉಪಯೋಗಿಸದೇ ಇರೋಕಾಗಲ್ವಾ ?

(4) ಮೊಬೈಲ್ ಫೋನ್ ಉಪಯೋಗಿಸೋದನ್ನು ನಿಲ್ಲಿಸೋಕೆ ಸಾಧ್ಯನಾ ?

115. ಈ ಕೆಳಗಿನವುಗಳಲ್ಲಿ ಒಂದು ಅನನಯಿಸುವ ಬರವಣಿಗೆಯನ್ನು (Persuasive Writing) ಒಳಗೊಳ್ಳುತ್ತದೆ. ಅದು ಯಾವುದು ?

(1) ಉದ್ಯೋಗ ಮೌಲ್ಯಮಾಪನ, ಸಂಪಾದಕರಿಗೆ ಬರೆಯುವ ಪತ್ರಗಳು

(2) ಜೀವನ ಚರಿತ್ರೆ, ಆತ್ಮ ಚರಿತ್ರೆ

(3) ವಿಶ್ವ ಕೋಶದ ಲೇಖನಗಳು / ಚಿತ್ರಗಳು

(4) ಪತ್ರಿಕಾ ವರದಿ, ಪಠ್ಯ ಪುಸ್ತಕಗಳು

116. ವಿದ್ಯಾರ್ಥಿಗಳ ಮೆಟಾಕಾಗ್ನಿಟಿವ್ ಕೌಶಲ್ಯವನ್ನು ವೃದ್ಧಿಪಡಿಸಲು ಶಿಕ್ಷಕರು ಬಳಸಬೇಕಾದ ವಿಧಾನ ?

(1) ಓದಿನ ಮುಂಚೆ ವಿದ್ಯಾರ್ಥಿಗಳಿಗೆ ಬಹುಸಾರ್ವತ್ರಿಕವಾದ ಪ್ರಶ್ನೆಗಳನ್ನು ಕೊಡುವುದು

(2) ಹೊಸ ಪಠ್ಯವನ್ನು ಅರ್ಥಮಾಡಿ ಕೊಳ್ಳಲು ಅವಶ್ಯವಿರುವ ಪದಗಳನ್ನು ಕಂಠ ಪಾಠ ಮಾಡಿಸುವುದು

(3) ಓದುವಾಗ ಸ್ವಂತಕ್ಕೆ ಪ್ರಶ್ನಿಸಿಕೊಳ್ಳುವ ಪ್ರಕ್ರಿಯೆಗೆ ಒತ್ತು ಕೊಡುವುದು

(4) ವಿದ್ಯಾರ್ಥಿಗಳು ಒಬ್ಬರಿಗೊಬ್ಬರಿಗೆ ಪ್ರಶ್ನೆಗಳನ್ನು ಕೊಡುವ ಹಾಗೆ ಮಾಡುವುದು

117. ಟಾಪಿಕ್ ಸೆಂಟೆನ್ಸ್ (Topic Sentence) ಎಂದರೆ

(1) ಒಂದು ಪ್ರಬಂಧದ ಪ್ರಮುಖ ಆಶಯ

(2) ಒಂದು ಪ್ರಬಂಧ ಇಲ್ಲವೇ ಕವಿತೆಯ ತಲೆಬರಹ

(3) ಒಂದು ಪ್ಯಾರಾಗ್ರಾಫ್ ನ ಮುಖ್ಯ ಅಂಶ

(4) ಒಂದು ಪ್ರಬಂಧದ ಉಪ ಶೀರ್ಷಿಕೆ

118. ವಿದ್ಯಾರ್ಥಿಗಳನ್ನು ಪ್ರಪಂಚವನ್ನು ಪ್ರೀತಿಸುವ ಹಾಗೆ ಮತ್ತು ಸುಂದರ ಭವಿಷ್ಯವನ್ನು ಕಲ್ಪಿಸಿಕೊಳ್ಳುವ ಹಾಗೆ ಪ್ರಚೋದಿಸುವ, ಮತ್ತು ವಿದ್ಯಾರ್ಥಿಗಳು ಇತರರನ್ನು ನೋಡಿಕೊಳ್ಳುವ ಮಟ್ಟಕ್ಕೆ ಪ್ರೋತ್ಸಾಹಿಸುವ ಶಿಕ್ಷಣಕ್ಕೆ ಏನೆಂದು ಕರೆಯುತ್ತೇವೆ ?

(1) ದೂರ ಶಿಕ್ಷಣ

(2) ಆಧ್ಯಯನಿಕ ಶಿಕ್ಷಣ

(3) ಧ್ವನ್ಯಾತ್ಮಕ ಶಿಕ್ಷಣ

(4) ಮೌಲ್ಯಾಧಾರಿತ ಶಿಕ್ಷಣ

119. ಒಂದು ಪಠ್ಯದಲ್ಲಿರುವ ಅಪರಿಚಿತ ಪದಗಳ ಅರ್ಥವನ್ನು ಕಂಡು ಕೊಳ್ಳುವುದು_____ ಕೌಶಲ್ಯದ ಒಂದು ಭಾಗ

(1) ಕೇಳಿಸಿಕೊಳ್ಳುವುದು

(2) ಮಾತನಾಡುವುದು

(3) ಓದುವುದು

(4) ಬರೆಯುವುದು

120. ದಿನ ಪತ್ರಿಕೆಯಿಂದ ಒಂದು ಜಾಹೀರಾತನ್ನು ಕೂಲಂಕುಷವಾಗಿ ನೋಡುವಾಗ ನಾವು ಅಳವಡಿಸಿಕೊಳ್ಳುವ ಸ್ಟ್ರಾಟೆಜಿ

(1) ಇಂಟೆನ್ಸಿವ್

(2) ಸ್ಕ್ಯಾನಿಂಗ್

(3) ಎಕ್ಸ್ಟೆಂಡೆಡ್

(4) ಸ್ಕಿಮ್ಮಿಂಗ್

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ನ್ನಾಗಿ ಆಯ್ಕೆ ಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

ಭಾಗ V

ಭಾಷೆ II

ಕನ್ನಡ

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 121 ರಿಂದ 129) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

ಜಯಪುರದ ಮುಖ್ಯಬೀದಿಗಳು ನನ್ನ ಮನಸ್ಸಿನ ಮೇಲೆ ತುಂಬಾ ಪರಿಣಾಮವನ್ನು ಬೀರಿದವು. ಒಂದು ಶತಮಾನದ ಹಿಂದೆ ಆ ನಗರದ ಬೀದಿಗಳು ನಿರ್ಮಾಣವಾಗಿದ್ದರೂ ಬಹಳ ಅಗಲವಾದ ಬೀದಿಗಳವು ; ನೇರವಾದವುಗಳು. ಬಹುದೂರದಿಂದ ಕಾಣಿಸುವ ಅಂಗಡಿ-ಮನೆಗಳ ದೇಶೀ ವಾಸ್ತುರಚನೆ ಚೆನ್ನಾಗಿ ಶೋಭಿಸುತ್ತದೆ. ಇಲ್ಲಿನ ಒಂದೊಂದು ಮನೆಯೂ ಒಂದೊಂದು ಶೈಲಿ ಯದೂ ಒಂದೊಂದು ದೇಶದ್ದೂ ಆಗಿ ಕಾಣಿಸುವುದಿಲ್ಲ. ಆದುದರಿಂದಲೇ ನನಗೆ ಅವುಗಳ ಮೇಲೆ ಮೋಹ. ಇಲ್ಲಿನ ಮುಖ್ಯ ಬೀದಿಗಳು ಸಂಧಿಸುವಲ್ಲಿ ಸುಂದರವಾದ ಚೌಕಗಳಿವೆ. ಕೆಲವೊಂದು ಕಡೆಗಳಲ್ಲಿ ಭವ್ಯವಾದ ಮಹಾದ್ವಾರಗಳಿವೆ. ಅಲ್ಲದೆ ಜಯಪುರ ಬಣ್ಣಗಾರರ ತವರೂರು. ಬಣ್ಣ ಹಾಕುವ ಕುಶಲಿಗರು ಆ ಊರಿನಲ್ಲಿ ಬಹಳ ಮಂದಿ ಇದ್ದಾರೆ. ಬಣ್ಣದ ಮೋಹವಿರುವ ಜನರೂ ಬಹಳ ಇದ್ದಾರೆ. ಗಿಡಮರಗಳಿಲ್ಲದ ಸ್ಥಳದಲ್ಲಿ ವಾಸಿಸುವ ಜನರಿಗೆ, ಕಣ್ಣಿನ ತಣಿವು ಹೇಗೆ ಬರಬೇಕು ? ಹಾಗೆಂದೋ ಏನೋ, ಇಲ್ಲಿನ ಜನರು ಅದರಲ್ಲೂ ಹೆಂಗಸರೂ ರಂಗುರಂಗಿನ ಲಂಗ, ಪಾಯಿಜಾಮಾ, ಸೀರೆ, ರವಿಕೆ, ಮೇಲುದೆ ತೊಡುವ ಅಭ್ಯಾಸದವರು. ಅದರಲ್ಲೂ ಕೆಂಪು, ಕಿತ್ತಳೆ, ಹಳದಿ ಎಂದರೆ ಪ್ರಾಣ. ನಿತ್ಯವೂ ಹೋಳಿ ಹುಣ್ಣಿಮೆ ಮಾಡುವವರಂತೆ ಬಣ್ಣದ ಚೆಲ್ಲಾಟ ಅವರ ಬಟ್ಟೆಗಳಲ್ಲಿ. ಗಂಡಸರೂ ರಂಗುರಾಯರೇ. ಅವರ ಪಂಚೆ, ಅಂಗಿಗಳಲ್ಲಿ ರಂಗು ಕಾಣಿಸದಿದ್ದರೂ ಮುಂಡಾಸಿನ ಮೂವತ್ತು ಮೊಳಗಳಲ್ಲಿ ಮುನ್ನೂರು ಬಣ್ಣಗಳನ್ನು ಮೆರೆಯಿಸುವುದುಂಟು. ಸುತ್ತುಸುತ್ತಿನ ಅವರ ದೇಶೀ ಮುಂಡಾಸನ್ನು ಚೆನ್ನಾಗಿ ಬಿಗಿದು ಕೊಂಡಾಗ ಶಾಲು ಗಂಭೀರವಾಗಿಯೇ ಕಾಣಿಸುತ್ತದೆ.

ನಾವು ನಗರವನ್ನು ಕಳೆದು, ಸುಂದರವಾದ ರಸ್ತೆಗಳಲ್ಲಿ ಹಾದು, ಉನ್ನತ ಬೆಟ್ಟಗಳಿ-ಗಭಿಮುಖವಾಗಿ ಹೊರಟೆವು. ಇನ್ನೊಂದು ನಾಲ್ಕು ಮೈಲಿಗೆ ಅಂಬೇರದ ಬೆಟ್ಟ ಸಿಗುತ್ತದೆ. ಅಂಬೇರ ಜಯಪುರದ ಪೂರ್ವಕಾಲದ ರಾಜಧಾನಿ. ಹಳೆಯ ಕೋಟೆ, ಅರಮನೆಗಳೆಲ್ಲ ಅಲ್ಲಿವೆ. ಸಂಜೆ, ಮುಂಜಾನೆಗಳಲ್ಲಿ ಅಲ್ಲಿಯ ಗುಡ್ಡ, ಬೆಟ್ಟ ಹಾಗೂ ಕಣಿವೆಗಳು ಅಪೂರ್ವ ಮೋಹಕತೆಯನ್ನು ತಾಳುತ್ತವೆ. ಹಿಂದೆ ನಾನು ಅಲ್ಲಿಗೆ ಹೋದಾಗ ಜನವಸತಿ ಇದ್ದಿರಲಿಲ್ಲ. ಹಲವಾರು ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು. ಈಗ ಹಾಗಿಲ್ಲ; ನೂರಾರು ಸಿಂಧೀ ಕುಟುಂಬಗಳು ಅಲ್ಲಿ ಮನೆ ಮಾಡಿಕೊಂಡಿವೆ. ಅಂಬೇರದ ಬುಡದಲ್ಲಿ ಒಂದು ಪುಟ್ಟ ಕೆರೆ. ಕೆರೆಯ ನೋಟ ಸುಂದರವಾದ ನೋಟ. ಸುತ್ತಲಿನ ಮರಗಳಲ್ಲಿ ಎಳೆ ಹಸುರು ತಳಿರುಗಳು ಚಿಗುರಿದ್ದು, ಮರಗಳು ಹಚ್ಚಗೆ ಕಾಣಿಸುತ್ತಿದ್ದವು. ಕೆರೆಯ ಮಗ್ಗುಲಿನಿಂದ ಮುಂದುವರಿದರೆ, ಸುಂದರ ಉದ್ಯಾನವೊಂದು ಕಾಣಸಿಗುತ್ತದೆ. ಬಳಿಯಲ್ಲೇ ಕೆಂಪು ಕಲ್ಲಿನ ಹಳೆಯ ಕಾಲದ ಕೆಲವೊಂದು ಸುಂದರ ಪ್ರತಿಮೆಗಳಿವೆ. ಪ್ರಾಚೀನ ರಜಪೂತ ಕೆತ್ತನೆಯ ಸರಳತೆ, ವೈಖರಿ, ಭವ್ಯತೆಗಳೆಲ್ಲ ಕಾಣಿಸುತ್ತವೆ. ಉದ್ಯಾನವನ್ನು ಹಾಯ್ದು ದಿಡ್ಡಿಯ ಬಾಗಿಲೊಂದನ್ನು ದಾಟಿ, ಕೋಟೆಯ ದಾರಿಯನ್ನು ಏರಿ ಹೋಗಬೇಕು. ಏರುತ್ತ ಹೋದಂತೆ, ಕೆಳಗಿನ ನೋಟ ರಮಣೀಯವಾಗುತ್ತಾ ಹೋಗುವುದು. ನಾವು ಅವಸರ ಅವಸರವಾಗಿ ಕೋಟೆಯನ್ನು ಸೇರಿದೆವು. ಕೋಟೆಯ ಒಳಗೆ ಅರಮನೆ. ಅರಮನೆಗೆ ಸಂಬಂಧಿಸಿದ ಸಭಾಂಗಣ ದೇವಾಲಯ ಮೊದಲಾದವನ್ನು ಅಲ್ಲಿ ಎರಡು ಮೂರು ಅಂತಸ್ತುಗಳಲ್ಲಿ ರಚಿಸಿದ್ದಾರೆ.

ಮೊದಲ ಅಂತಸ್ತಿನಲ್ಲಿ ಪುಟ್ಟ ದೇವಾಲಯವಿದೆ. ಈ ಪುಟ್ಟ ಮಂದಿರ ಚಿತ್ರ ಕೆಲಸಗಳಿಂದ ಕೂಡಿದ ಹಾಲುಗಲ್ಲಿನ ರಚನೆಯಿಂದ ಕೂಡಿದೆ. ಗೋಡೆಗಳೆಲ್ಲವೂ ಹಾಲುಗಲ್ಲಿನವೇ; ನೆಲವೂ ಅದರದ್ದೇ, ಸ್ತಂಭಗಳೂ ಅವುಗಳದ್ದೇ. ಗುಡಿ ಚಿಕ್ಕದಾಗಿದ್ದರೂ ಶಾಂತವಾಗಿ ಕಾಣಿಸುವ ಮಂದಿರ. ಗುಡಿಯ ವಿಗ್ರಹ ಮಾತ್ರ ಆಕಾರ ಹಾಗೂ ಅಲಂಕಾರಗಳಿಂದ ಅಷ್ಟೊಂದು ಶೋಭಿಸದು. ಇಲ್ಲಿಯ ಗುಡಿಯನ್ನು ನೋಡಿ, ಮೇಲಿನ ಅಂಗಳವನ್ನೇರಿ ಹೋದರೆ ದೊಡ್ಡದೊಂದು ಸಭಾಂಗಣ ಬರುತ್ತದೆ. ಇದು ವಿಶಾಲವಾದ ಹಾಲುಗಲ್ಲಿನ ರಚನೆ. ಆದರ ಚಾವಣಿ, ರಜಪುತಾನದ ಶೈಲಿಯ ಕಮಾನು ಮತ್ತು ಕಂಬಗಳು ತುಂಬ ಲಲಿತವಾಗಿದ್ದು, ಪರಸ್ಪರ ಹೊಂದಿಕೊಂಡು, ಈ ರಚನೆಗೆ ಚೆಲುವನ್ನು ನೀಡಿವೆ. ಎದುರಿನ ಅಂಗಣವೂ ಸಾಕಷ್ಟು ವಿಶಾಲವಾಗಿದೆ. ಇಲ್ಲಿಂದ ಮೂರನೆಯ ಅಂತಸ್ತಿಗೆ ಹೋದರೆ ರಾಜರ ಅಂತಃಪುರವನ್ನು ನೋಡಬಹುದು. ಇಲ್ಲಿನ ಕೆಲವು ಭಾಗಗಳಲ್ಲಿ ಚಂದ್ರಕಾಂತ ಶಿಲೆಯ ಸುಂದರ ಮಂಟಪಗಳಿವೆ. ಶಿಲೆಯನ್ನು ಕೆತ್ತಿ ಬಣ್ಣದ ಕಲ್ಲುಗಳಿಂದ ಕೊರೆದು ತುಂಬಿಸಿದ ಲತಾಪುಷ್ಪಗಳ ಚಿತ್ರಾವಳಿಗಳೂ ಇವೆ. ಇನ್ನೊಂದೆರಡು ಚಾವಡಿಗಳು ಕನ್ನಡಿಯ ಚೂರುಗಳನ್ನು ಸುಣ್ಣದ ಗಾರೆಯಲ್ಲಿ ಅಂಟಿಸಿ, ಚಿತ್ರವಿಚಿತ್ರ ಪ್ರತಿರೂಪಗಳನ್ನು ನಿರ್ಮಿಸಿ ಅಲಂಕರಿಸಿದಂತಹ ಕಂಬ, ಮುಚ್ಚಿಕೆಗಳುಳ್ಳ ರಚನೆ, ಕತ್ತಲಿನಲ್ಲಿ ದೀವಿಗೆ ಹೊತ್ತಿಸಿದಾಗ, ಲಕ್ಷೋಪಲಕ್ಷ ಈ ಗಾಜಿನ ತುಣುಕುಗಳು, ಚಾವಡಿಗೆ ನಕ್ಷತ್ರಲೋಕದ ಸೊಬಗನ್ನು ಕೊಡುತ್ತವೆ. ಅರಮನೆಯ ಮೊದಲನೆಯ ಮಟ್ಟದಲ್ಲಿ ಇನ್ನೊಂದು ಅಂತಃಪುರವಿದೆ. ಅಲ್ಲೂ ಹಾಲುಗಲ್ಲಿನ ಚಾವಡಿ ಮತ್ತು ನೀರಿನ ಕಾರಂಜಿಗಳಿವೆ. ಚಿತ್ರ ಕೊರೆದು ಮಾಡಿದ ಹಾಲುಗಲ್ಲಿನ ನೀರಕಾಲುವೆಗಳಿವೆ. ಇವೆಲ್ಲ ರಜಪೂತ ಅರಸರುಗಳ ರಸಿಕ ಜೀವನದ ದ್ಯೋತಕಗಳು.

121. ಲೇಖಕ ಜಯಪುರದ ಗಂಡಸರ ಮುಂಡಾಸಿನ ಉದ್ದವನ್ನು ಎಷ್ಟೆಂದು ಗುರುತಿಸಿದ್ದಾರೆ ?
(1) ಹತ್ತು ಮೊಳ
(2) ಇಪ್ಪತ್ತು ಮೊಳ
(3) ಮೂವತ್ತು ಮೊಳ
(4). ಇಪ್ಪತ್ತೈದು ಮೊಳ

122. ಜಯಪುರದ ಪೂರ್ವಕಾಲದ ರಾಜಧಾನಿ ಯಾವುದು ?
(1) ಜಯಪುರ
(2) ಅಂಬೇರ
(3) ಎರಡೂ ಹೌದು
(4) ಎರಡೂ ಅಲ್ಲ

123. ಅಂಬೇರ ಎಂಬ ಊರು
(1) ಅಂಬೇರ ಬೆಟ್ಟದ ಮೇಲಿದೆ
(2) ಅಂಬೇರ ಬೆಟ್ಟದ ಹತ್ತಿರವಿದೆ
(3) ಅಂಬೇರ ಬೆಟ್ಟದಿಂದ ದೂರವಿದೆ
(4) ಅಂಬೇರ ಬೆಟ್ಟದ ಬುಡದಲ್ಲಿದೆ

124. ಕೋಟೆಯ ಒಳಗಿನ ದೇವಾಲಯವನ್ನು ಕಟ್ಟಿರುವುದು
(1) ಹಾಲುಗಲ್ಲಿನಲ್ಲಿ
(2) ಕಪ್ಪು ಕಲ್ಲಿನಲ್ಲಿ
(3) ಬೆಣಚು ಕಲ್ಲಿನಲ್ಲಿ
(4) ಎಲ್ಲವೂ ಹೌದು

125. ಹಾಲುಗಲ್ಲಿನ ಇನ್ನೊಂದು ಹೆಸರು
(1) ಬೆಣಚು ಕಲ್ಲು
(2) ಅಮೃತ ಶಿಲೆ
(3) ಅಗ್ನಿ ಶಿಲೆ
(4) ಯಾವುದೂ ಅಲ್ಲ

126. ಹಾಲುಗಲ್ಲು ಪದ ಯಾವ ಸಂಧಿಗೆ ಉದಾಹರಣೆ ?

(1) ಲೋಪ ಸಂಧಿ

(2) ಆಗಮ ಸಂಧಿ

(3) ಗುಣ ಸಂಧಿ

(4) ಆದೇಶ ಸಂಧಿ

127. ಜಯಪುರ್ ಯಾವ ಬಗೆಯ ಕುಶಲಕರ್ಮಿಗಳ ತವರೂರು ?

(1) ಚಮ್ಮಾರರು

(2) ಕಮ್ಮಾರರು

(3) ಬಣ್ಣಗಾರರು

(4) ಕುಂಬಾರರು

128. ಜಯಪುರದ ನಗರವಾಸ್ತುವನ್ನು ಲೇಖಕ ಏನೆಂದು ಗುರುತಿಸಿದ್ದಾನೆ ?

(1) ದೇಶೀ

(2) ವಿದೇಶೀ

(3) ಸ್ವದೇಶೀ

(4) ಯಾವುದೂ ಅಲ್ಲ

129. ಈ ಗದ್ಯದಲ್ಲಿ ಬರುವ 'ರಂಗುರಂಗಿನ' ಎಂಬ ಪ್ರಯೋಗ ಯಾವುದರ ಉದಾಹರಣೆ ?

(1) ವಕ್ರೋಕ್ತಿ

(2) ದ್ವಿರುಕ್ತಿ

(3) ಅತ್ಯುಕ್ತಿ

(4) ಅನ್ಯೋಕ್ತಿ

ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ 130 ರಿಂದ 135) ಅತ್ಯಂತ ಸೂಕ್ತವಾದುದನ್ನು ಆಯ್ದು ಉತ್ತರಿಸಿ :

ಹೊಯ್ಸಳೇಶ್ವರ ಸಾಮ್ರಾಟ ವಿಷ್ಣುವರ್ಧನನು ದಂಡಯಾತ್ರೆಯಲ್ಲಿ ತಾನು ಗೆದ್ದ ತಲಕಾಡಿನಲ್ಲಿ ಶಾಂತಿ ಸ್ಥಾಪಿಸುವ ಸಲುವಾಗಿ ರಾಜಧಾನಿ ದ್ವಾರಸಮುದ್ರದಿಂದ ತೆರಳಿದ್ದ ಸಂದರ್ಭ. ಆ ಸಮಯದಲ್ಲಿ ಆತನ ಪಟ್ಟದರಸಿ ಶಾಂತಲಾದೇವಿ ಮತ್ತು ಯುವರಾಜಕುಮಾರ ಉದಯಾದಿತ್ಯರು ರಾಜಧಾನಿಯ ಸಂರಕ್ಷಕರಾಗಿ ನಿಂತರು.

ಈ ಸಂದರ್ಭದಲ್ಲಿ ಮಹಾರಾಣಿ ಗಂಡುಡುಗೆಯನ್ನುಟ್ಟು ಯುವರಾಜನೊಂದಿಗೆ ಸಾಮ್ರಾಜ್ಯದ ಕೆಲವಾರು ಭಾಗಗಳಲ್ಲಿ ಸಂಚರಿಸಿ ರಾಜ್ಯದ ಪರಿಸ್ಥಿತಿಯನ್ನು ತಿಳಿದುಕೊಂಡು ಬರುತ್ತಿದ್ದಳು. ಹೀಗೆ ಹೋದ ಒಂದು ಸಂದರ್ಭದಲ್ಲಿ ಒಮ್ಮೆ ಅವರಿಬ್ಬರೂ ದ್ವಾರಸಮುದ್ರದಿಂದ ಹೊರಟು ಹಲವು ಹಳ್ಳಿಗಳನ್ನು ದಾಟಿ ಬನದಮ್ಮನಹಳ್ಳಿ ಊರಿಗೆ ಬಂದರು. ಆ ಹಳ್ಳಿಯ ಹೊರಭಾಗದಲ್ಲಿದ್ದ ಬನಶಂಕರಿ ದೇವಾಲಯದ ಮುಂಭಾಗದ ಕಟ್ಟೆಯ ಹತ್ತಿರ ನೂರಾರು ಜನ ಸೇರಿದ್ದನ್ನು ಕಂಡರು. ಅಲ್ಲಿ ಏನೋ ಒಂದು ಹೊಸ ಬಗೆಯ ನ್ಯಾಯವನ್ನು ಬೇಡಲಾಗುತ್ತಿತ್ತು.

ಇಬ್ಬರೂ ಅಲ್ಲಿನ ಜನಸಮೂಹಕ್ಕೆ ಕಾಣದಂತೆ ದೂರದಲ್ಲಿ ಹಿಪ್ಪೇಮರದ ಮರೆಯಲ್ಲಿ ನಿಂತು ಅಲ್ಲಿ ನಡೆಯುತ್ತಿದ್ದುದ್ದನ್ನು ಆಲಿಸತೊಡಗಿದರು.

'ಏನ್ರಪ್ಪಾ ದೈವದವರು ಏನು ಹೇಳ್ತೀರಾ ಹೇಳ್ರೀ' ಗಾದಿಯ ಮೇಲೆ ಕುಳಿತಿದ್ದ ದಪ್ಪ ಮೀಸೆಯ ಗಾವುಂಡ ಕೇತುಮಲ್ಲ ನಾಯಕ ಕಟ್ಟೆಯ ಮೇಲೆ ಕುಳಿತಿದ್ದ ಹತ್ತು ಜನರನ್ನು ಕೇಳಿದ.

ಅಂದಿನ ಪಂಚಾಯ್ತಿಯಲ್ಲಿ ತೀರ್ಮಾನವಾಗಬೇಕಿದ್ದ ವಿಚಾರವೆಂದರೆ, ಎರಡು ವರ್ಷಗಳ ಹಿಂದೆ ಬೀರಣ್ಣ ಎಂಬಾತ ತನ್ನ ಹೊಲವನ್ನು ಈರಣ್ಣ ಎಂಬಾತನಿಗೆ

ಎಂಟು ಹೊನ್ನಿಗೆ ಮಾರಿದ್ದ. ಕ್ರಯಕ್ಕೆ ತೆಗೆದುಕೊಂಡ ಹೊಲದಲ್ಲಿ ಉಳುಮೆ ಮಾಡುವಾಗ ಈರಣ್ಣನಿಗೆ ಒಂದು ಕೊಪ್ಪರಿಗೆ ಬಂಗಾರ ಸಿಕ್ಕಿತ್ತು. ಈರಣ್ಣ ಅದನ್ನು ಪೂಜೆ ಮಾಡಿ ಬೀರಣ್ಣನ ಮನೆಗೆ ತೆಗೆದುಕೊಂಡು ಹೋಗಿ ಅದನ್ನು ಅವನೇ ತೆಗೆದುಕೊಳ್ಳಬೇಕಾಗಿ ಕೇಳಿದ. ಆದರೆ ಬೀರಣ್ಣನು ತಾನು ಹೊಲ ಮಾರಿದ ಮೇಲೆ ಅದರ ಮೇಲೆ ತನಗೆ ಹಕ್ಕಿಲ್ಲವೆಂದೂ ಅದರಲ್ಲಿ ಸಿಕ್ಕಿದ್ದೆಲ್ಲವೂ ಹೊಲ ಕೊಂಡವನಿಗೇ ಸೇರಬೇಕೆಂದೂ ಹೇಳಿ ಹೊನ್ನನ್ನು ತೆಗೆದುಕೊಳ್ಳಲು ನಿರಾಕರಿಸಿದ.

ಅದಕ್ಕೆ ಈರಣ್ಣ ತಾನು ಹಣ ಕೊಟ್ಟಿದ್ದು ಮಣ್ಣಿಗೇ ಹೊರತು ಅದರಲ್ಲಿ ಸಿಕ್ಕೋ ಹೊನ್ನಿಗಲ್ಲ, ಅದು ಬೀರಣ್ಣನ ಪಿತ್ರಾರ್ಜಿತ ಆಸ್ತಿ, ಆದ್ದರಿಂದ ಅದು ತನಗೆ ಬೇಡವೆಂದ.

ಅದಕ್ಕೆ ಬೀರಣ್ಣ

ಅದೆಂಗಾದಾತು ? ತಂಬುಲ ಉಗದ ಮ್ಯಾಲೆ ಮತ್ತೆ ಎತ್ತಿ ಬಾಯೊಳಗಿಟ್ಟು ಕೊಳ್ಳೋ ಕೆಟ್ಟತನ ಬ್ಯಾಡಾ ಹೊನ್ನು, ಹೊಲ ಕೊಂಡು ಕೊಂಡ ಈರಣ್ಣಂದೇ ಅವನು ತಗೊಳ್ಳೋ ಹಂಗ ಮಾಡಿ ಉಪಕಾರ ಮಾಡಬೇಕು ದೈವದವರು ಎಂದು ಬೇಡಿದ.

ಕಟ್ಟೆಯ ಮೇಲಿದ್ದ ದೈವದವರಿಗೆ ಏನೂ ತೋಚಲಿಲ್ಲ. ಕಡೆಗೆ ಮುಖ್ಯಸ್ಥನಾದ ಕೇತುಮಲ್ಲ ಹೇಳಿದ-'ಹೋಗಲಿ ಬಿಡಿ. ಇಬ್ಬರಿಗೂ ಬ್ಯಾಡವಾದ ಹೊನ್ನು ರಾಜ್ಯದ ಬೊಕ್ಕಸಾ ಸೇರಲಿ' ಎಂದ.

ಕೂಡಲೇ ಮರದ ಮರೆಯಲ್ಲಿದ್ದ ಶಾಂತಲೆ ಮುಂದೆ ಬಂದು, ಕೂಡದು..... ಕೂಡದು ಎಂದು ಕೂಗಿದಳು.

130. ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟದರಸಿ
(1) ಶಾಂತಲಾದೇವಿ
(2) ಪ್ರಿಯಾಂಕಾದೇವಿ
(3) ರಾಣಿ ಮಹಾದೇವಿ
(4) ಮಹಾರಾಣಿ ಗಿರಿಜಾದೇವಿ

131. ಬನದಮ್ಮನ ಹಳ್ಳಿಯಲ್ಲಿ ನಡೆದ ನ್ಯಾಯ-ನಿರ್ಣಯಕ್ಕೆ ಹಿರಿಯರಾಗಿದ್ದವರು ಯಾರು ?
(1) ಪಟ್ಟದರಸಿ ಶಾಂತಲಾದೇವಿ
(2) ಈರಣ್ಣ
(3) ಕೇತುಮಲ್ಲ
(4) ಬೀರಣ್ಣ

132. ಬಂಗಾರ ಪದದ ಸಮಾನಾರ್ಥಕ ಪದ
(1) ಚಿನ್ನ
(2) ಸುವರ್ಣ
(3) ಹೊನ್ನು
(4) ಇವೆಲ್ಲವೂ ಹೌದು

133. ಮಹಾರಾಣಿ ಶಾಂತಲಾದೇವಿ ನ್ಯಾಯ-ವಿಚಾರಣೆಯನ್ನು ಗುಪ್ತವಾಗಿ ನೋಡಿದ್ದು
(1) ಆಲದ ಮರದ ಮರೆಯಿಂದ
(2) ಹೊಂಗೆಯ ಮರದ ಮರೆಯಿಂದ
(3) ಮಾವಿನ ಮರದ ಮರೆಯಿಂದ
(4) ಹಿಪ್ಪೆ ಮರದ ಮರೆಯಿಂದ

134. ಈರಣ್ಣ ತನಗೆ ಸಿಕ್ಕ ಹೊನ್ನು ಯಾರಿಗೆ ಸೇರಬೇಕೆಂದು ವಾದಿಸಿದ ?
(1) ಕ್ಯಾತಮಲ್ಲನಿಗೆ
(2) ಉದಯಾದಿತ್ಯನಿಗೆ
(3) ಬೀರಣ್ಣನಿಗೆ
(4) ರಾಯಣ್ಣನಿಗೆ

135. ವಿಷ್ಣುವರ್ಧನನು ದಂಡಯಾತ್ರೆಯಲ್ಲಿ ಗೆದ್ದ ಊರು
(1) ದ್ವಾರಸಮುದ್ರ
(2) ತಲಕಾಡು
(3) ಬನದಮ್ಮನ ಹಳ್ಳಿ
(4) ಯಾವುದೂ ಅಲ್ಲ

136. ಪ್ರಾಥಮಿಕ ಶಿಕ್ಷಕನೋರ್ವ ತನ್ನ ವಿದ್ಯಾರ್ಥಿಗಳ ಶ್ರವಣ ಸಾಮರ್ಥ್ಯವನ್ನು ಹೀಗೆ ಹೆಚ್ಚಿಸಬಹುದು

(1) ದಿನನಿತ್ಯದ ಪಾಠಪ್ರವಚನಗಳಲ್ಲಿ ಶ್ರವಣಾತ್ಮಕ ಚಟುವಟಿಕೆಗಳನ್ನು ಸೇರಿಸುವುದರ ಮೂಲಕ

(2) ಮಾತನಾಡುವಾಗ ಮಧ್ಯದಲ್ಲಿ ನಿಲ್ಲಿಸಿ, ತಾನು ಹೇಳಿದ್ದನ್ನು ಹೇಳಿ ಎಂದು ಕೇಳುವುದರ ಮೂಲಕ

(3) ವಿದ್ಯಾರ್ಥಿಗಳು ಮಾತಾಡುವಾಗ ಪರ್ಯಾಯ ಶ್ರವಣ ವಿಧಾನವನ್ನು ಬಳಸುವುದರ ಮೂಲಕ

(4) ವಿದ್ಯಾರ್ಥಿಗಳಿಗೆ ತಾವೇನನ್ನು ಕೇಳಿಸಿ ಕೊಳ್ಳುತ್ತಿದ್ದೇವೆ ಎನ್ನುವುದನ್ನು ಗಮನಿಸಿ ಕೊಳ್ಳುವಂತೆ ಮತ್ತೆ ಮತ್ತೆ ಹೇಳುವುದರ ಮೂಲಕ

137. ಶಿಕ್ಷಕಿಯೊಬ್ಬಳ ತರಗತಿಯಲ್ಲಿ ಬಹು-ಭಾಷಾ ಹಿನ್ನೆಲೆಯ ವಿದ್ಯಾರ್ಥಿಗಳಿದ್ದಾರೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಎಚ್ಚರ ನೀಡಲು, ಅವರಿಗೆ ಕಷ್ಟವೆನಿಸುವ ಶಬ್ದಗಳನ್ನು ಉಚ್ಚರಿಸುವಾಗ ಚಪ್ಪಾಳೆ ತಟ್ಟುವ ಅಭ್ಯಾಸವನ್ನು ತನ್ನ ಪಾಠ ಪ್ರವಚನಗಳಲ್ಲಿ ಆಂಗಿಕ ಚಲನೆಯ ಭಾಗಗಳಾಗಿ ಬಳಸುತ್ತಾಳೆ. ಆಕೆಯ ಈ ಪರಿಪಾಠ ಕೆಳಗಿನ ಯಾವ ಅಂಶದ ಮೇಲೆ ಕೇಂದ್ರೀಕರಿಸುತ್ತದೆ ?

(1) ಪ್ರಾಸ

(2) ಪ್ರಾಗ್ಮ್ಯಾಟಿಕ್

(3) ಧ್ವನ್ಯಾತ್ಮಕ ಪ್ರಜ್ಞೆ (ಫೋನೋಲಾಜಿಕಲ್ ಅವೇರ್ನೆಸ್)

(4) ವ್ಯಾಕ್ಯಾತ್ಮಕ

138. ಇತರರೊಂದಿಗೆ ಪರಿಣಾಮಕಾರಿಯಾಗಿ ಸಂವಹಿಸುವ ಮತ್ತು ಅರ್ಥಮಾಡಿಕೊಳ್ಳಬಲ್ಲ ಸಾಮರ್ಥ್ಯದ ಹೆಸರು _____ಬುದ್ಧಿಮತ್ತೆ.

(1) ಸ್ಥಾನಿಕ

(2) ಭಾಷಿಕ

(3) ಅಂತರ್ ವ್ಯಕ್ತೀಯ

(4) ಅಂತಃ ವ್ಯಕ್ತೀಯ

139. ಶಿಕ್ಷಕಿಯೊಬ್ಬಳು ತನ್ನ ವಿದ್ಯಾರ್ಥಿಯೋರ್ವನ ತಪ್ಪು ಉತ್ತರಕ್ಕೆ ತುಂಬು ಮನಸ್ಸಿನಿಂದ ತಿದ್ದುಪಡಿ ನೀಡುತ್ತಾಳೆ. ಆ ಶಿಕ್ಷಕಿ ಯಾವ ಗುಣವನ್ನು ತೋರ್ಪಡಿಸುತ್ತಿದ್ದಾಳೆ ?

(1) ವಿದ್ಯಾರ್ಥಿಯ ಋಣಾತ್ಮಕ ಗ್ರಹಿಕೆಯನ್ನು ಅರ್ಥಮಾಡಿಕೊಳ್ಳುವ ಸಹನೆಯನ್ನು

(2) ಭಾಷಿಕ ಅಭಿವೃದ್ಧಿಯ ಬಲವರ್ಧನೆಯನ್ನು

(3) ಬಗೆಬಗೆಯ ಕಲಿಕಾ ವಿಧಾನವನ್ನು ಒಳಸೇರಿಸಿಕೊಳ್ಳುವುದನ್ನು

(4) ಕಾಗ್ನಿಟಿವ್ ಅಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತಿರುವುದು

140. ವಿದ್ಯಾರ್ಥಿಯೊಬ್ಬನ ಶಿಕ್ಷಣದಿಂದ ಲಾಭ ಪಡೆಯುವ ಸಾಮರ್ಥ್ಯ ದೈಹಿಕ, ಮಾನಸಿಕ ಅಥವಾ ಬೌದ್ಧಿಕ ಅಸಾಮರ್ಥ್ಯದ ಕಾರಣ ನಿರ್ಬಂಧಿತವಾಗಿದೆ. ಅಂತಹ ಸಂದರ್ಭದಲ್ಲಿ ಇರುವ ಆಯ್ಕೆ

(1) ಪರಿಹಾರಾತ್ಮಕ ಶಿಕ್ಷಣ
(2) ತರಗತಿ ವ್ಯವಸ್ಥಾಪನೆ
(3) ಮಾನವಿಕ ವಿಷಯಗಳನ್ನು ಆಧರಿಸಿದ ಶಿಕ್ಷಣ
(4) ವಿಶೇಷ ಅಗತ್ಯದ ಶಿಕ್ಷಣ (Special needs education)

141. ನಿರ್ಧಾರಣೆಯ ಮಾನದಂಡಗಳು (Criteria of Assessment)

(1) ಮೌಲ್ಯಮಾಪನ ನಿಯಮಾವಳಿ-ಗಳಾಗಿರುತ್ತವೆ
(2) ಪ್ರಶ್ನೆವಾರು ಅಂಕಗಳ ಹಂಚಿಕೆಯಾಗಿರುತ್ತದೆ
(3) ವಿದ್ಯಾರ್ಥಿಯ ಸಾಮರ್ಥ್ಯದ ಸಾಮಾನ್ಯ ಪರಿಣಾಮವಾಗಿರುತ್ತದೆ
(4) ನಿರ್ಧಾರಣ ಸಾಧನವಾಗಿರುತ್ತದೆ

142. ಕೆಳಗಿನವುಗಳಲ್ಲಿ ಅಂತ್ಯಪ್ರಾಸ ಜೋಡಿ ಗುರುತಿಸಿ.

(1) ಕನ್ನಡ ದೀಪ-ಕನ್ನಡ ಕೀರ್ತಿ
(2) ಸೂರ್ಯೋದಯ-ಚಂದ್ರೋದಯ
(3) ಆನಂದ ಭೈರವಿ-ವಿನೂತ ವೈಭವ
(4) ಝೇಂಕಾರ-ಕಲರವ

143. ಕನ್‌ಸ್ಟ್ರಕ್ಟಿವಿಸಮ್ ಸಿದ್ಧಾಂತದ ಪ್ರಕಾರ ವಿದ್ಯಾರ್ಥಿಗಳು

(1) ತಮ್ಮ ಸ್ವಂತ ಅನುಭವಗಳನ್ನು ಸೂತ್ರೀಕರಿಸುವುದು ಮತ್ತು ಪ್ರತಿಬಿಂಬಿ-ಸುವುದರ ಮೂಲಕ ಅರ್ಥೈಸುವಿಕೆ ಮತ್ತು ಅರಿವನ್ನು ತಮಗೆ ತಾವೇ ರೂಪಿಸಿಕೊಳ್ಳುತ್ತಾರೆ.
(2) ವೈವಿಧ್ಯಮಯ ಉದಾಹರಣೆ ಮತ್ತು ಮಾದರಿಗಳ ಮೂಲಕ ಒಳ್ಳೆಯ ಬುಡವನ್ನು ರೂಪಿಸುತ್ತಾರೆ.
(3) ಶಿಕ್ಷಕರ ಸಹಾಯದಿಂದ ಮತ್ತು ಬಹುಮಾಧ್ಯಮ ಆಧಾರಿತ ಸಂಶೋಧನೆಯ ಸಹಾಯದಿಂದ ತಮ್ಮದೇ ಸಿದ್ಧಾಂತಗಳನ್ನು ರೂಪಿಸುತ್ತಾರೆ.
(4) ತಮ್ಮದೇ ಕಲಿಕಾ ವಿಧಾನಗಳನ್ನು ರೂಪಿಸಿಕೊಂಡು ಅದರ ಮೂಲಕ ಸ್ವಂತ ಅನುಭವವನ್ನು ರೂಪಿಸಿಕೊಳ್ಳುತ್ತಾರೆ.

144. ಸಂವಾದವೊಂದರಲ್ಲಿ ಸಂದೇಶದಲ್ಲಿನ ಕೆಲ ಅಂಶಗಳನ್ನು ಗುರುತಿಸುವುದು ಇಲ್ಲವೇ ಸೂಕ್ಷ್ಮಗ್ರಹಣ ಮಾಡುವುದು_____ಚಟುವಟಿಕೆ.

(1) ಓದುವ
(2) ಬರೆಯುವ
(3) ಶ್ರವಣದ
(4) ಮಾತವಾಡುವ

145. ವಿಷಯ ಕೇಂದ್ರಿತ ಕಲಿಕೆಯಲ್ಲಿ ಕಲಿಕಾ ಅನುಭವಗಳು ಯಾವುದರ ಸುತ್ತ ಕೇಂದ್ರಿತವಾಗುತ್ತವೆ ?
(1) ವಿದ್ಯಾರ್ಥಿಗಳ ಆಸಕ್ತಿಯ ಸುತ್ತ
(2) ಕೋರ್ಸಿನ ಪಠ್ಯದ ಸುತ್ತ
(3) ಶಿಕ್ಷಕರ ವಿಷಯದ ಅರಿವಿನ ಆಳದ ಸುತ್ತ
(4) ಶೈಕ್ಷಣಿಕ ತಾಂತ್ರಿಕತೆಯ ಸುತ್ತ

146. ಸಹಜ ಪ್ರತಿಭೆಯ ಲಕ್ಷಣಗಳು ಸಾಮಾನ್ಯವಾಗಿ ಈ ಮೂಲಕ ದೊರೆಯುತ್ತವೆ.
(1) IQ ಟೆಸ್ಟ್ ನಲ್ಲಿ
(2) EQ ಟೆಸ್ಟ್ ನಲ್ಲಿ
(3) ಶಿಕ್ಷಕರು ಮತ್ತು ಪೋಷಕರ ಮೂಲಕ
(4) ಸಂಚಿತ ಶಾಲಾ ದಾಖಲೆಗಳ ಮೂಲಕ

147. ಶಾಲೆಯ ಶಿಕ್ಷಕನೋರ್ವ ತನ್ನ ಪಾಠದಲ್ಲಿ ಯಾವಾಗಲೂ ಬಹುರಾಷ್ಟ್ರೀಯ ಕಂಪನಿಗಳ ಔದ್ಯೋಗಿಕ ಬೇಡಿಕೆಗಳನ್ನು ಒಂದಕ್ಕಿಂತ ಹೆಚ್ಚಿನ ಭಾಷೆಗಳ ಅರಿವಿನ ಮಹತ್ವವನ್ನು ತಿಳಿಸಲು ಸೇರಿಸಿಕೊಳ್ಳುತ್ತಾರೆ. ಇದು ವಿದ್ಯಾರ್ಥಿಗಳಿಗೆ
(1) ವಿವಿಧ ಬಗೆಯ ದ್ವಿಭಾಷಿಕರನ್ನು ಗುರುತಿಸಲು ಸಹಾಯ ಮಾಡುತ್ತದೆ
(2) ಯಾವ ಕಾರಣಕ್ಕಾಗಿ ಬೇರೆ ದೇಶಕ್ಕೆ ಜನ ವಲಸೆ ಹೋಗುತ್ತಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.
(3) ದ್ವಿಭಾಷಿಕತೆಯ ವಿಶ್ವವ್ಯಾಪಕ ಅಸ್ತಿತ್ವ ಮತ್ತು ಅದರಿಂದ ಉದ್ಯೋಗ ಲಾಭವನ್ನು ಗುರುತಿಸಲು ಸಹಾಯ ಮಾಡುತ್ತದೆ.
(4) ದೊಡ್ಡವರಾದ ಮೇಲೆ ಎಲ್ಲಿ ಕೆಲಸ ಮತ್ತು ವಾಸ ಮಾಡಬಹುದೆಂದು ತಿಳಿಯಲು ಸಹಾಯ ಮಾಡುತ್ತದೆ.

148. ಒಂದು ವಾಕ್-ಶ್ರವಣದ ನಿರ್ಧಾರಣೆಯಲ್ಲಿ (assessment) ಕೆಳಗಿನ ಸಂವಾದವನ್ನು ನೀವು ಏನೆಂದು ನಿರ್ಧಾರಣೆ ಮಾಡುತ್ತೀರಿ ?

| |
|---|
| ಶಿಕ್ಷಕ : ದೆಹಲಿಯ ಪರಿಸರ ಏಕೆ ಹಾಳಾಗಿದೆ ? |
| ವಿದ್ಯಾರ್ಥಿ 1 : ಧೂಳು ಮತ್ತು ಹೊಗೆಯಿಂದಾಗಿ |
| ವಿದ್ಯಾರ್ಥಿ 2 : ನನಗೂ ಹಾಗೆ, ತುಂಬಾ ಹಾಳಾಗಿದೆ |

(1) ವಿದ್ಯಾರ್ಥಿ 1 : ತಪ್ಪು ಉತ್ತರ
ವಿದ್ಯಾರ್ಥಿ 2 : ಸರಿ ಉತ್ತರ
(2) ವಿದ್ಯಾರ್ಥಿ 1 : ಸರಿ ಉತ್ತರ
ವಿದ್ಯಾರ್ಥಿ 2 : ತಪ್ಪು ಉತ್ತರ
(3) ವಿದ್ಯಾರ್ಥಿ 1 : ತಪ್ಪು ಉತ್ತರ
ವಿದ್ಯಾರ್ಥಿ 2 : ತಪ್ಪು ಉತ್ತರ
(4) ವಿದ್ಯಾರ್ಥಿ 1 : ಸರಿ ಉತ್ತರ
ವಿದ್ಯಾರ್ಥಿ 2 : ಸರಿ ಉತ್ತರ

149. ಪಠ್ಯವೊಂದರಲ್ಲಿ ಪದವೊಂದರ 'ಮೌಲ್ಯ' ಎಂದರೆ
(1) ಆ ಪದ ಸಾಂದರ್ಭಿಕವಾದ ಪರೋಕ್ಷ ಪ್ರಯೋಗ
(2) ಪದವೊಂದನ್ನು ಬಳಸುವುದರ ವಿವಿಧ ಬಗೆ
(3) ಆ ಪದದ ನಿಘಂಟಿನ ಅರ್ಥ
(4) ಆ ಪದ ಬಳಕೆಯಾಗಿರುವ ಸಂದರ್ಭದಲ್ಲಿ ಅದರ ಔಚಿತ್ಯ

150. ಯಾವ ಬಗೆಯ ಭಾಷಾ ಬೋಧನೆಯ ಪದ್ಧತಿ ವಿದ್ಯಾರ್ಥಿಗಳು ಅರ್ಥಪೂರ್ಣ ಮತ್ತು ಅಧಿಕೃತ ಸಂಪರ್ಕ ಸಂವಹನದಲ್ಲಿ ತೊಡಗಿ ಕೊಳ್ಳುವುದಕ್ಕೆ ಹೆಚ್ಚು ಒತ್ತು ಕೊಡುತ್ತದೆ ?
(1) ವ್ಯಾಕರಣ-ಅನುವಾದ ಪದ್ಧತಿ
(2) ದ್ವಿಭಾಷಿಕ-ಪದ್ಧತಿ
(3) ಸಂವಹನ ಪದ್ಧತಿ
(4) ಅನೌಪಚಾರಿಕ ಪದ್ಧತಿ

# SPACE FOR ROUGH WORK

ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
9. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
10. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
12. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**READ CAREFULLY THE FOLLOWING INSTRUCTIONS :**

1. Out of the four alternatives for each question, only one circle for the correct answer is to be darkened completely with Blue/Black Ball Point Pen on Side-2 of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet / Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
6. Each candidate must show on demand his / her Admission Card to the Invigilator.
7. No candidate, without special permission of the Superintendent or Invigilator, should leave his / her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet a second time will be deemed not to have handed over the Answer Sheet and dealt with as an unfair means case.
9. Use of Electronic / Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room / Hall.** ***The candidates are allowed to take away this Test Booklet with them.***

**निम्नलिखित निर्देश ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के पृष्ठ-2 पर केवल एक वृत्त को ही पूरी तरह नीले/काले बॉल पॉइन्ट पेन से भरें । एक बार उत्तर अंकित करने के बाद उसे बदला नहीं जा सकता है ।
2. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर पत्र में निर्धारित स्थान के अतिरिक्त अन्यत्र न लिखें ।
3. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
4. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
5. परीक्षार्थी द्वारा परीक्षा हॉल/कक्ष में प्रवेश कार्ड के सिवाय किसी प्रकार की पाठ्य सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
8. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा ।
9. इलेक्ट्रॉनिक / हस्तचालित परिकलक का उपयोग वर्जित है ।
10. परीक्षा-हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
11. किसी हालत में परीक्षा पुस्तिका और उत्तर पत्र का कोई भाग अलग न करें ।
12. **परीक्षा सम्पन्न होने पर, परीक्षार्थी कक्ष / हॉल छोड़ने से पूर्व उत्तर पत्र कक्ष-निरीक्षक को अवश्य सौंप दें ।** ***परीक्षार्थी अपने साथ इस परीक्षा पुस्तिका को ले जा सकते हैं ।***

SEAL